ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1161 (1527)
ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ಬಸವನಬಾಗೇವಾಡಿಯನ್ನು ಪಟ್ಟಣ ಪ್ರದೇಶವೆಂದು ಯಾವಾಗ ಘೋಷಿಸಲಾಗಿದೆ;

ಬಸವನಬಾಗೇವಾಡಿ ಪಟ್ಟಣ ಪಂಚಾಯಿತಿಯನ್ನು ದಿನಾಂಕ: 31.10.1995 ರಂದು ಪುರಸಭೆ ಎಂದು ಘೊಷಿಸಲಾಗಿದೆ.

ಆ) ಬಸವನಬಾಗೇವಾಡಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇದೆಯೇ;

ಇಲ್ಲ

ಇ) ಬಸವನಬಾಗೇವಾಡಿ ಪಟ್ಟಣದ ಒಳಚರಂಡಿ ವ್ಯವಸ್ಥೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಬಸವನಬಾಗೇವಾಡಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ನಗರ ನಿರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ 2006–07ನೇ ಸಾಲಿನ ದರಪಟ್ಟಿ ಅನುಸಾರ ರೂ.844.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ಯೋಜನೆಗೆ ಕೇಂದ್ರ ಸರ್ಕಾರ ಪುರಸ್ಕೃತ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ (UIDSSMT) ಅಡಿಯಲ್ಲಿ ಕಾರ್ಯಗತಗೊಳಿಸಲು ದಿನಾಂಕ: 15.02.07 ರಂದು ಜರುಗಿದ UIDSSMT ಎರಡನೇ ರಾಜ್ಯ ಮಟ್ಟದ ಅಯ್ಕೆಸಮಿತಿಯಲ್ಲಿ ಅನುಮೋದನೆ ದೊರೆತಿದೆ.

ಈ) ಬಸವನಬಾಗೇವಾಡಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮಂಜೂರಾತಿ ನೀಡಿದೆಯೆ;

ಮೇಲೆ ನಮೂದಿಸಿದಂತೆ.

ಉ) ಯಾವ ಕಾಲಮಿತಿಯೊಳಗಾಗಿ ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗುವುದು.

ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ 24 ತಿಂಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

ಊ) ಅದಕ್ಕಾಗಿ ತಗಲುವ ಅಂದಾಜು ವೆಚ್ಚ ಎಷ್ಟು?

ಈ ಯೋಜನೆಗೆ ರೂ.844.00 ಲಕ್ಷ ಅಂದಾಜು ವೆಚ್ಚ ತಗಲುವುದು.

ಋ) ಇದಕ್ಕೆ ತಗಲುವ ಅಂದಾಜು ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದು?

ಈ ಯೋಜನೆಗೆ ಈ ಕೆಳಕಂಡ ಮೂಲಗಳಿಂದ ಅಂದಾಜು ವೆಚ್ಚವನ್ನು ಭರಿಸಲಾಗುವುದು

1) ಕೇಂದ್ರ ಸರ್ಕಾರದಿಂದ–ರೂ 675.20 ಲಕ್ಷ ಅನುದಾನ (80%)

2) ಕರ್ನಾಟಕ ಸರ್ಕಾರದಿಂದ – ರೂ. 84.40ಲಕ್ಷ ಅನುದಾನ (10%)

3) ಸ್ಥಳೀಯ ಸಂಸ್ಥೆಯ ವಂತಿಗೆ (10%) ರೂ. 84.40 ಲಕ್ಷ

ಒಟ್ಟು ರೂ.844.00ಲಕ್ಷ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1162(1528)

ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಭಿವೃದ್ಧಿ ಪಡಿಸಲು ಮತ್ತು ಪುನರ್ ವ್ಯವಸ್ಥೆ ಗೊಳಿಸಲು ಯಾವ ಮಾರ್ಗ ಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗಿದೆ;

ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳಿಗೆ ಆಧ್ಯತೆ ನೀಡಿ ಅಬಿವೃದ್ಧಿಪಡಿಸಲು ಮತ್ತು ಪುನರ್ ವ್ಯವಸ್ಥೆಗೊಳಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದ್ದು, ಕಾಮಗಾರಿಗಳ ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗನುಸಾರವಾಗಿ ಕ್ರಮಕೈಗೊಳ್ಳಲಾಗಿದೆ.

ಆ) ಮಾರ್ಗಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿ ಮನಗೂಳಿ–ಬಿಜ್ಜಳ ರಾಜ್ಯ ಹೆದ್ದಾರಿ ಯಾವ ಕ್ರಮಾಂಕದಲ್ಲಿದೆ;

ಸದರಿ ಕಾಮಗಾರಿಯ ಅಭಿವೃದ್ಧಿ ಕಾರ್ಯವನ್ನು ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಇ) ಮಾರ್ಗ ಸೂಚಿಗಳನ್ವಯ ಆದ್ಯತಾ ಪಟ್ಟಿಯಲ್ಲಿರುವ (ಕ್ರಮವಾಗಿ) ರಾಜ್ಯ ಹೆದ್ದಾರಿಗಳು ಯಾವುವು;

ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಮೇಲಿನಂತೆ ಅನುದನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಇವೆಲ್ಲವುಗಳನ್ನು ಯಾವ ನಿರ್ಧಿಷ್ಟ ಕಾಲಮಿತಿ ಹಾಕಿಕೊಂಡು ಅಭಿವೃದ್ಧಿಪಡಿಸಲಾಗುವುದು?

ಕಾಮಗಾರಿಯ ಆಕಾರ, ಅವಶ್ಯಕತೆ ಹಾಗೂ ಅದರಲ್ಲಿ ಒಳಗೊಂಡ ಅಂಶಗಳ ಹಾಗೂ ಅನುದಾನದ ಲಭ್ಯತೆಯ ಪ್ರಕಾರ ಕಾಲಮಿತಿಯನ್ನು ನಿಗಧಿಪಡಿಸಲಾಗುವುದು.